

# ರೈನ್‌ಬೊ ಚೋಕರ್

## ಕತ್ತಿನ ಸುತ್ತ ಕಾಮನಬಿಲ್ಲು

ಕತ್ತನ್ನು ಬಿಗಿದಪ್ಪುವ ರೈನ್‌ಬೊ ಚೋಕರ್ ಹೊಸದಾಗಿ ಆಭರಣ ಲೋಕಕ್ಕೆ ಲಗ್ಗೆ ಇಟ್ಟಿದೆ. ಯಾವುದೇ ಬಣ್ಣದ ಉಡುಪಿಗಾದರೂ ಮ್ಯಾಚಿಂಗ್ ಆಗುವಂಥ ಕಾಮನಬಿಲ್ಲಿನ ಚೋಕರ್ ಫ್ಯಾಷನ್‌ಪ್ರಿಯರನ್ನು ಸೆಳೆಯುತ್ತಿದೆ.

■ ಕೃಷ್ಣವೇಣಿ ಪ್ರಸಾದ್ ಮುಳಿಯ

ಕತ್ತಿಗೆ ಬಿಗಿದಪ್ಪುವ ಚೋಕರ್ ಎವರ್‌ಗ್ರೀನ್ ಫ್ಯಾಷನ್ ಎಂದೇ ಪ್ರಸಿದ್ಧ. ಇದೀಗ ಒಡವೆ ಫ್ಯಾಷನ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಚೋಕರ್ ನೆಕ್ಲೇಸ್ ಬಂದಿದೆ. ವಿಭಿನ್ನ ಲುಕ್ ಕೊಡುವ ರೈನ್‌ಬೊ ಚೋಕರ್ ನೆಕ್ಲೇಸ್ ಫ್ಯಾಷನ್ ಟ್ರೆಂಡ್ ಸೃಷ್ಟಿಸಿದೆ.

ಬಂಗಾರದಲ್ಲಿ ಹೊಸ ಹೊಸ ವಿನ್ಯಾಸದ ವೈವಿಧ್ಯಮಯ ಒಡವೆಗಳು ಮಾರುಕಟ್ಟೆಗೆ ಬಂದು ಮಹಿಳೆಯರ ಮನಸೆಳೆಯುತ್ತಲೇ ಇರುತ್ತದೆ. ಈ ಹೊಸ ವಿನ್ಯಾಸ ಸಾಲಿಗೆ ಸೇರ್ಪಡೆಯಾದದ್ದು ರೈನ್‌ಬೊ ಚೋಕರ್.

ಇದು ಕುತ್ತಿಗೆಯ ಸುತ್ತ ಗಟ್ಟಿಯಾಗಿ ಅಲ್ಲಾಡದಂತೆ ಇದ್ದು ನೆಕ್ಲೇಸ್‌ಗಿಂತಲೂ ಹೆಚ್ಚು ಪ್ರಸಿದ್ಧವಾಗಿದೆ. ಇದರಲ್ಲಿ ಹಲವು ವಿಭಿನ್ನ ವಿನ್ಯಾಸಗಳಿವೆ. ಕಾಮನಬಿಲ್ಲಿನಲ್ಲಿ ಬರುವ ಎಲ್ಲಾ ಬಣ್ಣಗಳ ಜೊತೆಗೆ ಇನ್ನು ಹಲವು ಬಣ್ಣಗಳಲ್ಲಿ ಈ ರೀತಿಯ ಚೋಕರ್‌ಗಳು ಲಭ್ಯ. ಇದಕ್ಕೆ ಮುತ್ತು, ಹರಳು, ಮಣಿಗಳನ್ನು ಅಳವಡಿಸಿ ಮಾಡಿದರೆ ಇನ್ನೂ ಗಮನಸೆಳೆಯುವಂತಿರುತ್ತದೆ. ಇದಕ್ಕೆ ರೈನ್‌ಬೊ ಚೋಕರ್ ಎಂದು ಹೆಸರು.

ಸರದಲ್ಲಿ ಚಿನ್ನದ ಪ್ರಮಾಣ ಕಡಿಮೆ ಇರಬೇಕು. ತೊಡಲು ಹಗುರವಾಗಿರಬೇಕು, ವಿನ್ಯಾಸದಲ್ಲಿ ವೈವಿಧ್ಯವಿರಬೇಕು, ಬಂಗಾರದ ನೋಟಕ್ಕೆ ಕೊರತೆ ಬಾರದಂತೆ ಇರಬೇಕು, ಬೀಡ್ಸ್‌ಗಳನ್ನು ಅಳವಡಿಸಿದ ಚೋಕರ್ ಅದ್ಭುತವಾಗಿ ವಿನ್ಯಾಸಗೊಳಿಸಿರಬೇಕು... ಇವೆಲ್ಲ ಇಂದಿನ ಕಾಲದ ಹುಡುಗಿಯರ ಮನದಾಳ. ಇವರ ಮನದಿಂಗಿತ ಅರಿತ ವಿನ್ಯಾಸಗಾರರು ಹೊರತಂದದ್ದೇ ಈ ರೈನ್‌ಬೊ ಎಂಬ ಹೊಸ ಚೋಕರ್. ಈ ಚೋಕರ್‌ಗಳು ಸಾಮಾನ್ಯವಾಗಿ ನಾಲ್ಕು ಎಳೆಯಲ್ಲಿ ಇದ್ದು ಚಿನ್ನದ ಗುಂಡುಗಳೊಂದಿಗೆ ಪೋಣಿಸಿದ್ದು 16 ಇಂಚು ಉದ್ದ ಇದ್ದರೆ ಸಾಕು. ಮಧ್ಯದಲ್ಲಿ ಆ್ಯಂಟಿಕ್ ಪೆಂಡೆಂಟ್‌ಗಳನ್ನು ಅಳವಡಿಸಿದರೆ ಹೆಚ್ಚು ಲುಕ್.

ಇದರಲ್ಲಿ ಮಹಾಲಕ್ಷ್ಮಿ, ಗಜಲಕ್ಷ್ಮಿ, ಗಂಡಭೇರುಂಡ, ನವಿಲು, ಜೋಡಿ ನವಿಲು, ಹಲಸುಗಳು, ಹೂವಿನ ಬೇರೆ ಬೇರೆ ದಪ್ಪ ಎಸಳುಗಳ ವಿನ್ಯಾಸ ಕೀರ್ತಿಮುಖ (ದೇವರ ಒಂದು ರೂಪ) ಹೀಗೆ ಹಲವು ವಿನ್ಯಾಸಗಳನ್ನು ಒಳಗೊಂಡಿದ್ದು ಹಚ್ಚ ಹಸುರಿನ, ಅಚ್ಚ ಕೆಂಪಿನ ಹರಳು, ನೈಸರ್ಗಿಕ ಹರಳು, ಕೃತಕ ಹರಳು, ನೈಸರ್ಗಿಕ ಮುತ್ತು, ಕೃತಕ ಮುತ್ತು... ಹೀಗೆ ಯಾವುದಾದರೂ